ಕವಿತೆ



## ರಮೇಶ ಅರೋಲಿ

ಕಲೆ: ರೂಪಶ್ರೀ ಕಲ್ಲಿಗನೂರು



# ಮೋಜಿನ ಮೇಜು

ಮೇಜೊಂದು ಮಾಡಿದೆ ಮೇಜು
ಏನಂತ ಹೇಳಲದರ ಮೋಜು

ಅಡವಿ ಅಂಗಳದಾಗ ಬಿಲ್ವ ಬಿನ್ನಾಣಗಿತ್ತಿ
ಹಲಸು ಮೈನೆರೆದು ನಿಂತು ಬೀಗಿತ್ತ ತಲೆಯೆತ್ತಿ
ತೇರಿಗಲ್ಲದೆ ತಾನು ಬೇರು ಬಿಡನೆಂದ ಮೇಜು
ತೊಗಟೆ ಕಳಚಲು ತಾ ಸಣಕಲು ಮೈ ಮೇಜು

ಬಡಗಿ ಕೈಯಲ್ಲಿ ಒದಗಿ ಹೊನ್ನೆ ತಾ ದೇವರಾಗಿ
ಕಾಲಿಗೆ ಬಿದ್ದವರ ಕಣ್ಣೆತ್ತಿ ಕಾಣದಾಗಿ
ಜೋಡುಗಾಲಿನ ಮೇಜು ಒಂದೆರಡ ಆ ಮೋಜು
ಉಂಡೆದ್ದು ಹೋದವರ ಲೆಕ್ಕ ಮಾಡದ ಮೇಜು

ತುಂಡಲ್ಲೆ ಬೆನ್ನಾಗಿ ತುಳಿಯಲು ಕಾಲಾಗಿ
ಮಠಪತಿ ಮೂಲೆಗೆ ಮಟ್ಟಾಸ ಚೌಕಾಗಿ
ಸುಣ್ಣಕ್ಕೆ ಬಣ್ಣಕ್ಕೆ ಒಗ್ಗುವ ಈ ಮೇಜು
ಬಗ್ಗಿ ಬಂದವರೆಲ್ಲ ಗುಗ್ಗು ಗೋವೆಂದ ಮೇಜು

ದಿಮಿ ದಿಮಿ ಕುಣಿತಿತ್ತ ಧಿಮಾಕಿನ ಕಾವು
ದಿಡ್ಡಿ ಬಾಗಿಲಿಗಲ್ದೆ ಕಡ್ಡಿ ಬಾರದ ಬೇವು
ಉಳಿಪೆಟ್ಟು ತಡಿಯದೆ ಗಳಗಳ ಅಳೊ ಮೇಜು
ಟೀವಿ ಫ್ಯಾನು ಹೊತ್ತು ಠೀವಿಲಿ ಇರೊ ಮೇಜು

ಟಾಕು ಟೀಕಾಗಿತ್ತು ಮೋಟುದ್ದ ತೊಲೆಯಾಗಿ
ಉರಿ ಬಿಸಿಲ ತಲೆಮ್ಯಾಲೆ ತಳದಾಗ ನೆರಳಾಗಿ
ಸುತ್ತಿಗೆ ಬಡಿದರೆ ಗಪ್ಪಾದ ಈ ಮೇಜು
ಕೋರ್ಟು ಗದ್ದಲದಿ ಕೋಟೆಚನ್ನಯ್ಯ ಮೇಜು

ಮೈ ತುಂಬ ಚಿತ್ತಾರ ಕಳೆ ಹೊತ್ತ ಹೂ ಕುಸುರಿ
ಮಗು ಹತ್ತಿ ಕುಣಿದರೆ ನಕ್ಕಂಗ ಎಳೆ ಬಸುರಿ
ಕುಂಟುತ್ತ ಕೆನೆದರೆ ಕುದುರಿ ಓಟದ ಮೇಜು
ಕುಂತಾಗ ಸಭೆಗಂತ ದುಂಡೀನ ಈ ಮೇಜು

ಸಾಮಾರ ಸಣ್ಣಂತು ಸಂತೆಗೆ ನಡೀ ಅಂತು
ಕುಂತಲ್ಲಿ ಕೂಡಂತು ನಿಂತಲ್ಲಿ ನಿಲ್ಲಂತು
ಗೆದ್ದೆ ತಾನೀ ಜಗವ ಸುದ್ದಿ ಮಾಡೆಂದ ಮೇಜು
ಗೆದ್ದಲು ತಿನ್ನಲು ಒಲೆ ಹೊಕ್ಕ ಭಲೇ ಮೇಜು

ಮೇಜೊಂದು ಮಾಡಿದೆ ಮೇಜು
ಏನಂತ ಹೇಳಲದರ ಮೋಜು